ಈಚೆಗೆ ಹೊಟ್ಟೆಯನ್ನು ಮಾತ್ರ ಉಬ್ಬಿಸಿಕೊಂಡು ಬೆಳೆಯುತ್ತಿತ್ತು.

ದಿನಗಳು ಕಳೆದಂತೆ ವನಜಳಿಗೆ ಮಗುವನ್ನು ಕಂಡು ಚಿಂತೆ ಹತ್ತಿತು. ಡಾಕ್ಟರ ಬಳಿ ಒಯ್ದಾಗ ಅವಳಂಜಿದಂತೆಯೇ ಅದಕ್ಕೆ ಕಾಯಿಲೆಯಾಗಿತ್ತು. ಲಿವರ್ ಉಬ್ಬಿಹೋಗಿತ್ತು.

ಸೂರ್ಯ ಉದಯಿಸಿದ ಆಗಸದ ತುಂಬ ಮೋಡ ಮತ್ತೆ ಮುಸುಕಿದರೂ ಅವಳಿಗೆ ಅದೇನೊ ಹಟ, ಆ ಮೋಡದ ನೀರನ್ನೆಲ್ಲಾ ಹೀರಿ ಕುಡಿಯಬೇಕೆಂಬ ಬಲವಾದ ಛಲ. ಅವಳ ಮನಸ್ಸಿನಲ್ಲಿ ಚಿಂತೆ ಕಾಡುತ್ತಿದ್ದರೂ ಭಯದ ಲವಲೇಶವೂ ಇರಲಿಲ್ಲ.

'ನೀವು ಹೇಗ್ಹೇಗೆ ಹೇಳ್ತೀರೊ ಹಾಗೆ ಚಾಚೂ ತಪ್ಪದೆ ನಾನು ಔಷಧಿ ಪಥ್ಯ ಮಾಡುತ್ತೇನೆ ಡಾಕ್ಟರೇ... ಮಗೂನ ಮಾತ್ರ ಹೇಗಾದ್ರೂ ಉಳಿಸಿಕೊಡಿ... ಇದರ ಆಸೆ ಬಿಟ್ಟರೆ ಇನ್ನೇನೂ ನನಗೆ ಜೀವನದಲ್ಲಿ ಗುರಿ ಇಲ್ಲ...' ಎಂದಳು.

'ಯಾವುದನ್ನೂ ನಾನು ಹೇಳಲಾರೆಮ್ಮಾ... ಇದು ಸಿರ್ರೋಸಿಸ್'ಗೆ ತಿರುಗಿದೆ. ಆದರೆ ಆಸೆಯನ್ನು ನೀವು ಬಿಡಿಬೇಡಿ. ಇದೊಂದು ಪ್ರಯೋಗಕ್ಕೊಳಗಾಗುವ ಕೂಸು... ಬದುಕಿದರೆ ನಿಮ್ಮ ಪುಣ್ಯ.'

ವನಜ ಕಣ್ಣಮೇಲೆ ಕಣ್ಣಿಟ್ಟು ಮಗುವನ್ನು ನೋಡಿಕೊಳ್ಳುತ್ತಿದ್ದಳು. ಮಗು ದಿನೇ ದಿನೇ ಹದಗೆಡುತ್ತಿದ್ದರೂ ಯಾವುದೋ ಒಂದು ನಂಬಿಕೆಯನ್ನೇ ಹಲ್ಮುಡಿಗಳಲ್ಲಿ ಕಚ್ಚಿಕೊಂಡು ದಿನಗಳನ್ನು ದಾಟುತ್ತಿದ್ದ ವನಜ ಒಂದು ದಿನ ಮಗು ಮಲಗಿದ್ದಾಗ, ಹಣದ ಮುಗ್ಗಟ್ಟಿಗಾಗಿ ಯಾರದೋ ಕೆಲಸ ಮುಗಿಸಿ ಔಷಧಿ ತೆಗೆದುಕೊಂಡು ಮನೆಗೆ ಸುಸ್ತಾಗಿ ಹಿಂದಿರುಗಿದಾಗ ಕಂಡದ್ದೇನು?

ಒಳಗೆ ಗಟ್ಟಿಯಾಗಿ ನಗುತ್ತಿದ್ದ ಜಾನಕಿ ಮತ್ತು ಅವಳಿದ್ದಲ್ಲಿಂದಲೇ ಮಲಗಿ ಎದ್ದಂತೆ ಬರುತ್ತಿದ್ದ ಅವಳ ಗಂಡ!

'ನೀ ಯಾವಾಗ ಬಂದೇ?' ಎಂದು ಮುಗಿಲೇ ಸೀಳಿ ತಲೆ ಮೇಲೆ ಬಿದ್ದಂತೆ ಚೀರಿಬಿಟ್ಟಳು ವನಜ.

ಯಾವುದು ಆಗಬಾರದು ಎಂದುಕೊಂಡಿದ್ದಳೊ, ಯಾವುದು ತನ್ನ ಮನಃಸ್ಥೈರ್ಯವನ್ನು ಒಡೆಯುವುದು ಎಂದುಕೊಂಡಿದ್ದಳೊ ಅದೇ ಆಗಿತ್ತು! ಅಪರಾಧಿಯಾಗಿ ತಲೆ ಬಾಗಿಸಿ ನಿಂತ ಹೊಣೆಗೇಡಿ ಜಾನಕಿಯ ಗಂಡನನ್ನು ಕಂಡೊಡನೆ ಅವಳ ಮೈಯೆಲ್ಲಾ ಉರಿದುಹೋಯಿತು.

ಧೈರ್ಯವೆಲ್ಲ ಕಲಸಿಹೋಯಿತು.

ಶಕ್ತಿಯ ಒತ್ತಡವನ್ನೆಲ್ಲಾ ಉಪಯೋಗಿಸಿಬಿಟ್ಟ ಬಾಣದಂತೆ ಮಗುವನ್ನು ಮಲಗಿಸಿದ್ದಡೆ ಧಾವಿಸಿದಳು.

ಅವಳಿಗೆ ಇನ್ನು ಆ ಮಗು ಬದುಕುಳಿಯುವ ಆಸೆ ಒಂದಿಷ್ಟೂ ಉಳಿಯಲಿಲ್ಲ. ಜಾನಕಿಯ ಗಂಡ ಮತ್ತೆ ಕುಡುಗೋಲು ಹಿಡಿದು ಬಂದನೆ?... ಶಾಪ... ಮರಣದ ಶಾಪ...

ಒಂದು ಉದಯ... ಒಂದು ಅಸ್ತಮ.

ಅವಳ ತಲೆ ಚಕ್ರಾಕಾರದಲ್ಲಿ ಸುತ್ತುತಿತ್ತು.

ತಂಗಿ... ಹುಚ್ಚಿನ ತಂಗಿಯನ್ನೊಮ್ಮೆ ನೋಡಿದಳು.

ಹೊರಬೆಳಕಲ್ಲಿ ಸಾವೊಂದನ್ನು ಕಳುಹಿಸಲು ಅಣಿಯಾಗಿ, ಇದೀಗ ಒಳಗಿನ ಅಜ್ಞಾನದ ಕತ್ತಲ ಕೋಣೆಯಿಂದ ಜೀವವೊಂದನ್ನು ಬರಮಾಡಿಕೊಳ್ಳಲು ಅವೆರಡರ ನಡುವಿನ ಹೊಸಲಲ್ಲಿ ಅಸ್ತವ್ಯಸ್ತ ರೀತಿಯಲ್ಲಿ ನಿಂತಿದ್ದ ತಂಗಿಯನ್ನು ಕಂಡಳು.

ವನಜಳ ಕಣ್ಣಿಂದ ದಪ್ಪನಾದ ಬಿಸಿನೀರ ಹನಿಯೊಂದು ಉದುರುತ್ತಿತ್ತು.